

ಬದುಕು ನೋಡ್ತೀವಲ್ಲ. ಜನಪ್ರಿಯ ಸಾಹಿತ್ಯ ರೂಪಾಂತರವಾಗಿದೆ. ಗಂಭೀರ ಸಾಹಿತ್ಯ ಓದುವವರು ಮೊದಲಿನಿಂದಲೂ ಕಡಿಮೆಯೇ. ಸೋಶ್ಯಲ್ ಮೀಡಿಯಾ ನನ್ನ ಮಟ್ಟಿಗೆ ಭೋಗದ ಜಗತ್ತು. ನನಗೆ ಟ್ವಿಟ್ಟರ್, ಗಿಟ್ಟರ್ ಯಾವುದೂ ಅರ್ಥ ಆಗುವುದಿಲ್ಲ. ಈ ವಯಸ್ಸಿನಲ್ಲಿ ಕಣ್ಣು, ಗೋಣು, ಸೊಂಟ ಗಟ್ಟಿ ಇದ್ದರೇ ಬದುಕುವುದು. ಅದಕ್ಕೆ ಧಕ್ಕೆ ಆಗಬಾರದು.

**★ ಸಾಹಿತಿಗಳ ವಲಯದಲ್ಲೇ ಚಂಪಾ ಒಬ್ಬ ಸ್ಯಾಡಿಸ್ಟ್, ವಿಘ್ನಸಂತೋಷಿ, ಜಗಳಗಂಟಿ ಅಂತೆಲ್ಲ ಹೇಳ್ತಾರೆ..?**

**ಚಂಪಾ:** ಈ ಬಿರುದುಗಳನ್ನು ನಾ ಪಡೆದಿದ್ದಲ್ಲ, ನೀವೇ ಕೊಟ್ಟದ್ದು. ಪ್ರಶ್ನೆ ಕೇಳೋದೇ ಜಗಳಗಂಟತನ ಎಂದು ನಮ್ಮ ದೇಶದಲ್ಲಿ ಮೊದಲಿನಿಂದ ಇದೆ. ಪ್ರಶ್ನೆ ಕೇಳಿದ್ರೆ ಹಾಳಾಗ್ತೀ, ಸಂಶಯ ಪಡಬೇಡ ಎನ್ನುತ್ತಾರೆ. ನಮ್ಮಪ್ಪ ಬಿ.ಎಚ್. ಪಾಟೀಲ ಇಂಗ್ಲಿಷ್ ಮೇಷ್ಟ್ರು, ವಿಚಾರವಾದಿ.ಬಿಎ ಕಂಪ್ಲೀಟ್ ಮಾಡಲಿಲ್ಲ. ಮೃತ್ಯುಂಜಯ ಪ್ರಸಾದ ನಿಲಯದಲ್ಲಿ ಜಗಳ ಆಗಿರಬೇಕು, ಹೊರಗೆ ಹಾಕಿದ್ರು. ವಿಪರೀತ ಓದ್ತಿದ್ದ. ನನಗೂ ಅಣ್ಣನಿಗೂ ಓದುವ ಚಟ ಬೆಳೆದದ್ದೇ ಅವನಿಂದ. ನಾನಾಗಿ ಯಾರ ಕೂಡಾನೂ ಜಗಳ ತೆಗೆಯೋದಿಲ್ಲ. ಕಾರಣವಿಲ್ಲದೇ ಪ್ರೀತಿ ಕೂಡಾ ಮಾಡೋದಿಲ್ಲ.

**★ ಇತ್ತೀಚೆಗೆ ಸ್ವಲ್ಪ ಬದಲಾಗಿದ್ದೀರಾ? ಈಗ ನಿಮ್ಮನ್ನು ಸಮನ್ವಯ ಸಾಹಿತಿ ಎನ್ನಬಹುದೆ?**

**ಚಂಪಾ:**ಬದಲಾವಣೆ ಇಲ್ಲದಿದ್ದರೆ ಬೆಳವಣಿಗೆ ಹೇಗೆ ಸಾಧ್ಯ? ಆದರೆ ಇದು ಸಮನ್ವಯ ಅಲ್ಲ, ಮೆಚ್ಯೂರಿಟಿ ಅಂತೀನಿ. ಆಯುಧ ಬಹಳ ದಿವಸ ನಮ್ಮ ಕೈಯಲ್ಲಿದ್ದರೆ ಅದನ್ನು ಹೇಗೆ ಬಳಸೋದು ಎನ್ನುವ ಹದ ಗೊತ್ತಾಗುತ್ತದೆ. ಮೊದಲೆಲ್ಲ ಸಿಕ್ಕ ಸಿಕ್ಕವರಿಗೆ ಹೊಡೆಯುತ್ತಿದ್ದೆ. ಈಗ ನೋಡಿ, ನೋಡಿ ಹೊಡೆಯೋದು. (ನಗು..)

**★ ಲಂಕೇಶ್, ಅನಂತಮೂರ್ತಿ, ಕೊನೆಗೆ ಬಂಡಾಯ ಸಂಘಟನೆಯಲ್ಲಿ ನಿಮ್ಮವರೇ ಆದ ಬರಗೂರು ರಾಮಚಂದ್ರಪ್ಪ ಎಲ್ಲರ ಜತೆಗೂ ನಿಮ್ಮ ಜಗಳ ನಡೆಯಿತು..?**

**ಚಂಪಾ:** ಲಂಕೇಶ್ ಜತೆ ನನ್ನದು ಭಯಂಕರ ಪ್ರೀತಿ. ಅಂವಾ ನನ್ನ ಬಿಗ್ ಬ್ರದರ್; ಯೆಲ್ಡರ್ ಬ್ರದರ್ ಅಲ್ಲ. ಅವನಿಂದ ತುಂಬಾ ಕಲ್ತೇವಿ. ಕಳ್ಳಿನ ಮನುಷ್ಯ. ಆತ್ಮೀಯತೆಯಿಂದ ನೋಡಿಕೊಂಡ. ಕನ್ನಡ ಮತ್ತು ರೈತ ಚಳವಳಿ ಎರಡಕ್ಕೂ ದೊಡ್ಡ ವೇದಿಕೆಯಾಗಿತ್ತು ಲಂಕೇಶ್ ಪತ್ರಿಕೆ. ಅಲ್ಲಿ ವಿದ್ಯಾವರ್ಧಕ ಸಂಘ ನಮ್ಮ ಕಾರ್ಯಾಲಯವಾದರೆ ಇಲ್ಲಿ ಪತ್ರಿಕೆ ನಮ್ಮ ಕಾರ್ಯಾಲಯ. ಅದೊಂದು ಸಂಬಂಧಗಳ ಸುವರ್ಣ ಯುಗ. ಆದರೆ 1983ರಲ್ಲಿ ಮೊದಲ ಕಾಂಗ್ರೆಸ್ಸೇತರ ಸರ್ಕಾರ ಬಂತಲ್ಲ.. ಆಗ ಎಸ್.ಆರ್.ಬೊಮ್ಮಾಯಿ ಅಥವಾ ಎಸ್.ಬಂಗಾರಪ್ಪ ಮುಖ್ಯಮಂತ್ರಿ ಆಗಬೇಕಿತ್ತು. ಅದನ್ನು ತಪ್ಪಿಸಿ ರಾಮಕೃಷ್ಣ ಹೆಗಡೆ ಮುಖ್ಯಮಂತ್ರಿಯಾಗಲು ಮುಖ್ಯ ಕಾರಣ ಪಿ.ಲಂಕೇಶ್ ಮತ್ತು ಪೂರ್ಣಚಂದ್ರ ತೇಜಸ್ವಿ. ಈ ವಿಷಯಕ್ಕೆ ಈ ಇಬ್ಬರನ್ನೂ ನಾನು ಇವತ್ತಿಗೂ ಕಟಕಟೆಯಲ್ಲಿ ನಿಲ್ಲಿಸುತ್ತೇನೆ. ಅವರು ಮಾಡಿದ್ದು ಅಕ್ಷಮ್ಯ ಅಪರಾಧ. ಮಾಡಬಾರದ ತಪ್ಪು. ಲಂಕೇಶ್ ಪತ್ರಿಕೆ ಬೆನ್ನಿಗೆ ಇರಲಿಲ್ಲ ಎಂದರೆ ರಾಮಕೃಷ್ಣ ಹೆಗಡೆ ಸಿಎಂ ಆಗ್ತಿರಲಿಲ್ಲ. ಆಗ ಸ್ವಲ್ಪ ಲಂಕೇಶ್ ಬಗ್ಗೆ ಭ್ರಮನಿರಸನ ಆಯ್ತು. ಪತ್ರಿಕೆಯಲ್ಲಿ ನಾನು ನೋಟ ಎನ್ನುವ ಅಂಕಣ ಬರೀತಿದ್ದೆ. ಮುಂದೆ ಜನತೆಗೆ ಹೆಗಡೆಯವರ ಬಗ್ಗೆ ಭ್ರಮನಿರಸನವಾಗಿದೆ ಎನ್ನುವುದು ಗೊತ್ತಾಯಿತು, ಅದರ ಬಗ್ಗೆ ಬರೀತೇನೆ ಅಂದಾಗ ಲಂಕೇಶ್ ಬೇಡ ಎಂದರು. ಯಾಕೆ ಬೇಡ.. ಎಂದು ವಾದ ಮಾಡಿದೆ. 'ನಮ್ಮಿಂದ ಬಂದ ಸರ್ಕಾರ, ನಾವೇ ಟೀಕಿಸಬಾರದು' ಎಂದರು. ಅದೇ ಭಿನ್ನಮತ. ಬಳಿಕ ಅವರು ಕೇಳಿಕೊಂಡರೂ ನಾನು ಕಾಲಂ ಬರೆಯಲಿಲ್ಲ. ಅಷ್ಟೊತ್ತಿಗೆ ಲಂಕೇಶ್ ಜಗದ್ಗುರು ಆಗಿದ್ದರು! ರೈತ ಚಳವಳಿ ಮತ್ತು ಕನ್ನಡ ಚಳವಳಿ ಜತೆ ಸೇರಿ ಕೆಲಸ ಮಾಡಿದೆ. ಹುಬ್ಬಳ್ಳಿಯಲ್ಲಿ ನಂಜುಂಡಸ್ವಾಮಿಯವರು ದೊಡ್ಡ ಸಮಾವೇಶ ನಡೆಸಿದರು. ಕನ್ನಡ ದೇಶ ಪಕ್ಷ ಹುಟ್ಟಿತು. ನಮ್ಮನ್ನೆಲ್ಲ ಲಂಕೇಶ್ ಕಟುವಾಗಿ ಟೀಕಿಸತೊಡಗಿದರು. ನಾನು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷನಾದಾಗಲೂ ಈ ಟೀಕೆ ಮುಂದುವರಿಯಿತು.

**★ ಬರಗೂರು ರಾಮಚಂದ್ರಪ್ಪ ಅವರ ಜತೆಗೆ ಏನು ಸೈದ್ಧಾಂತಿಕ ಭಿನ್ನಮತ?**

**ಚಂಪಾ:** ಏನೂ ಇರಲಿಲ್ಲ, ಇವತ್ತಿಗೂ ಇಲ್ಲ. ಆದರೆ ಬಂಡಾಯ ಸಂಘಟನೆಯೊಳಗೆ, ಇವತ್ತಿಗೂ ಒಂದು ಬರಗೂರು ಗುಂಪು ಅಂತ ಇದೆ. ಇಡೀ ಕರ್ನಾಟಕದಲ್ಲಿ ಬಂಡಾಯ ಸಾಹಿತಿಗೆ ಅಭಿಮಾನಿ ವರ್ಗ ಅಂತ ಇದ್ದರೆ ಅದು ಬರಗೂರು ಅವರಿಗೆ ಮಾತ್ರ. ಅವರು ಮೊದಲಿಂದಲೂ ಅದನ್ನು ಬೆಳೆಸಿಕೊಂಡು ಬಂದಿದ್ದಾರೆ. ಅಧಿಕಾರ ಸ್ಥಾನದಲ್ಲಿ ಇದ್ದಾಗ ಪೋಷಿಸಿಕೊಂಡು ಬಂದಿದ್ದಾರೆ. ಪ್ರೋತ್ಸಾಹ ಒಳ್ಳೆಯದಕ್ಕೇ. ಆದರೆ ಹೆಚ್ಚಿನವರು ಅವರ 'ಅಹಿಂದ' ಕುಲಬಾಂಧವರು. ಅದು ಅವರ ರೀತಿ. ಅದು ಅವರ ಶಕ್ತೀನೂ ಇರಬಹುದು, ಮಿತೀನೂ ಇರಬಹುದು. ನಮ್ದು ದಾಸೋಹದ ರೀತಿ. ಎಲ್ಲರ ಕೂಡಿ ಊಟ ಮಾಡೋದು, ಜಗಳ ಮಾಡೋದು.

**★ ಜೆ.ಎಚ್.ಪಟೇಲ್ ಅವರು ಎರಡನೇ ಅವಧಿಗೆ ಬಿಜೆಪಿ ಬೆಂಬಲದೊಂದಿಗೆ ಮುಖ್ಯಮಂತ್ರಿ ಆದಾಗ ಅವರ ಜತೆಗೆ ಹೋದಿರಿ. ತಪ್ಪಲ್ವೆ?**

**ಚಂಪಾ:** ಹೌದು ಸೈದ್ಧಾಂತಿಕವಾಗಿ ನಾನು ಮಾಡಿದ್ದು ತಪ್ಪು. ಅದನ್ನು ಆಗಲೂ ಹೇಳಿದ್ದೆ. ನನ್ನ ಸಂಗಾತಿಗಳು ಸಕಾಲಕ್ಕೆ ನನಗೆ ಸರಿಯಾದ ಸಲಹೆ ಕೊಟ್ಟಿದ್ದರೆ ನಾನು ಬದಲಾಗುತ್ತಿದ್ದೆ. ಹಾಗೆ ಮಾಡುವುದು ಗೆಳೆಯರ ಜವಾಬ್ದಾರಿ ಅಲ್ಲವೆ? ಸರಿಯಲ್ಲ ಅಂತ ಒಬ್ರೂ ಹೇಳಲಿಲ್ಲ. ಸಂಘಟನೆಯೊಳಗೆ ಅಧಿಕೃತವಾಗಿ ನಾನು ಇದ್ದದ್ದು ಒಂದೂವರೆ ವರ್ಷ ಮಾತ್ರ. ಕೋಲಾರದಲ್ಲಿ ಬಂಡಾಯದ ಸಭೆ ನಡೆಯಿತು. ನಾನು ಗೋಕಾಕ್ ಚಳವಳಿಗೆ ಹೋದೆ.

**★ ಧಾರವಾಡ ಬಿಟ್ಟು ಪೂರ್ತಿಯಾಗಿ ಬೆಂಗಳೂರಿಗೆ ಬಂದು ಸೆಟ್ಲ್ ಆಗಿದ್ದೀರಿ. ಉತ್ತರ ಕರ್ನಾಟಕದ ಬಗ್ಗೆ ಅಸಮಾನತೆ ಇದೆ ಎನ್ನುವುದಕ್ಕೆ ಏನು ಹೇಳ್ತೀರಿ?**

**ಚಂಪಾ:** ಧಾರವಾಡ ಕ್ಕೆ ಅವಕಾಶಗಳು ಏನೂ ಕಡಿಮೆ ಆಗಿಲ್ಲ. ಆದರೆ ಉತ್ತರ ಕರ್ನಾಟಕಕ್ಕೆ, ಹೈದ್ರಾಬಾದ್ ಕರ್ನಾಟಕಕ್ಕೆ ಅಸಮಾನತೆ ಆಗಿರುವುದು ಈಗಲೂ ಒಡೆದು ಕಾಣುತ್ತದೆ. ಹೈಕ ದವರಿಗಂತೂ ಅವರ ಪಾಲು ಸಿಕ್ಕಿಲ್ಲ. ಆದರೆ ಅದಕ್ಕಾಗಿ ಪ್ರತ್ಯೇಕ ರಾಜ್ಯ ಸ್ಥಾಪನೆಯ ಕೂಗನ್ನು ನಾನು ಒಪ್ಪುವುದಿಲ್ಲ. ರಾಜಕಾರಣಿಗಳಿಗೆ ಅದರಿಂದ ಲಾಭ ಆಗಬಹುದು. ಆದರೆ ಜನಸಾಮಾನ್ಯರಿಗೆ ಲಾಭ ಇಲ್ಲ. ಯಾವ ರಾಜ್ಯ ಬಂದ್ರೂ ಅವರು ರಾಗಿ ಬೀಸೋದು ತಪ್ಪೋದಿಲ್ಲ.

**★ ಅಭಿವ್ಯಕ್ತಿ ಸ್ವಾತಂತ್ರ್ಯದ ಬಗ್ಗೆ ಈಗ ದೊಡ್ಡ ಚರ್ಚೆ ಎದ್ದಿದೆ..?**

**ಚಂಪಾ:** ಪ್ರಶ್ನೆ ಕೇಳುವವರನ್ನು ಬಾಯಿ ಮುಚ್ಚಿಸುವ ಪ್ರವೃತ್ತಿ ಇತ್ತೀಚೆಗೆ ಹೆಚ್ಚಾಗಿದೆ. ಕಮಲ ಹಾಸನ್, ಪ್ರಕಾಶ್ ರೈ ಮತ್ತಿತರರ ಪ್ರಕರಣಗಳೂ ಅದನ್ನೇ ತೋರಿಸುತ್ತಿವೆ. ನಾವು ಇದನ್ನು ಎದುರಿಸಲೇಬೇಕು. ಇದು ಬಹಳ ದಿನ ನಡೆಯೋದಿಲ್ಲ. ಇಡೀ ದೇಶದ ಕೇಂದ್ರವೇ ಸಮನ್ವಯತೆಯದ್ದು. ಎಲ್ಲರೂ ಹೊಂದಿಕೊಂಡು ಬಾಳುವುದು. ಶರಣ, ಸೂಫಿ ಸಂಸ್ಕೃತಿ, ದಾಸರು, ತತ್ವಪದಕಾರರು ಎಲ್ಲರೂ ಇದನ್ನೇ ಹೇಳಿದ್ದು. ಈಗ ಯಾರೋ ಬಂದು ಧರ್ಮಾಧಾರಿತ ದೇಶ ಕಟ್ಟುತ್ತೇವೆ ಎಂದರೆ ಅದು ಆಗೋದಿಲ್ಲ. ಈಗ ನಡೆಯುತ್ತಿರುವ ಲಿಂಗಾಯತ ಧರ್ಮದ ಜನಾಂದೋಲನವೂ 12ನೇ ಶತಮಾನದ ಚಳವಳಿಯ ಮುಂದುವರಿಕೆಯೇ ಆಗಿದೆ. ನಾವೆಲ್ಲ ಬಂಡಾಯದವರು; ಬುದ್ಧ, ಬಸವ, ಅಂಬೇಡ್ಕರ್, ಕುವೆಂಪು ಅವರ ವಿಚಾರಧಾರೆಯವರು. ●